ರಾಜ್ಯದಲ್ಲಿ ಸಕ್ಕರೆ ದಾಸ್ತಾನು

110(501): ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಸರ್ಕಾರಿ, ಸಹಕಾರಿ ಹಾಗೂ ಖಾಸಗಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆ ದಾಸ್ತಾನು ಎಷ್ಟು. ಕಾರ್ಖಾನೆವಾರು ವಿವರಗಳನ್ನು ನೀಡುವುದು;

ಆ. ಈ ಸಕ್ಕರೆಯನ್ನು ವಿದೇಶಗಳಿಗೆ ರಫ್ತು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಹದೇವ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು

ಅ. ರಾಜ್ಯದಲ್ಲಿ ಸಹಾಕರಿ ಹಾಗೂ ಖಾಸಗಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಲ್ಲಿ ದಿನಾಂಕ: 31.5.02ರ ಅಂತ್ಯಕ್ಕೆ 12.20 ಲಕ್ಷ ಟನ್ ಸಕ್ಕರೆ ದಾಸ್ತಾನು ಇರುತ್ತದೆ. ಕಾರ್ಖಾನೆವಾರು ಸಕ್ಕರೆ ದಾಸ್ತಾನಿನ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆ. ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯವಹಾರಿಕ ಲಾಭ ಅಧರಿಸಿ ಸಕ್ಕರೆಯನ್ನು ರಫ್ತು ಮಾಡಬಹುದಾಗಿದೆ. ಈ ಹಿಂದೆ ಇದ್ದಂತೆ ಇಂತಿಷ್ಟೇ ಪ್ರಮಾಣದ ಸಕ್ಕರೆ ರಫ್ತು ಮಾಡಬೇಕಂಬ ನಿಬಂಧನೆ ಈಗ ಇರುವುದಿಲ್ಲ. ಕೇಂದ್ರ ಸರ್ಕಾರ ರಫ್ತು ಉತ್ತೇಜನ ರೂಪದಲ್ಲಿ ರಫ್ತು ಮಾಡುವ ಪ್ರತಿ ಟನ್ನಿಗೆ ರೂ. 1000.00 ರಂತೆ ಸಾಗಾಣಿಕೆ ಉತ್ತೇಜನ ನೀಡಲು ನಿರ್ಧರಿಸಿದೆ. ರಾಜ್ಯ ಸರ್ಕಾರದಿಂದಲೂ ಸಹ ರಫ್ತು ಮಾಡಲ್ಪಡುವ ಸಕ್ಕರೆಯ ಉತ್ಪಾದನೆಗೆ ಬಳಸಿದ ಕಬ್ಬಿಗೆ ಖರೀದಿ ತೆರಿಗೆ ವಿನಾಯಿತಿ ಸಹ ನೀಡುತ್ತಿದೆ.

Statement showing the closing stock of sugar of the sugar Factories in Karnataka as on 31.5.2002. (in MTs.)

Sl. No.	Name of the sugar factory	closing stock of sugar
Coop. Sector:		
1.	Bhadra	27264
2.	Bhagyalakshmi	-
3.	Bidar	52952
4.	Dakshinakannada	4778
5.	Doodhgangakrishna	72249

6.	Ghataprabha	41965
7.	Halasiddanatha	27276
8.	Hemavathy	16901
9.	Hiranyakeshi	128897
10.	Karnataka	15903
11.	Malaprabha	57871
12.	Nandi	52606
13.	Pandavapura	20386
14.	Raibag	3734
15.	Raithara SSK	43980
16.	SSK Aland	-
17.	Sri. Srirama	12624
18.	Vanivilasa	14533
19.	Krishna	----------
	Total	**593919**
	Public Sector:	
20.	M.P.M. sugars.	23335
21.	Mysore sugar co.,	54238
	Total:	77573
Joint Sector:		
22.	Gangavathi	8025
	Total	**8025**
Private Sector:		
23.	Bannari Amman sugars	83755
24.	Chamundeshwari sugars	54891

25.	Davanagere sugars	34984
26.	Godavari sugars	90625
27.	I.S.R	23025
28.	I.C.L	36888
29.	Mahadeshwara	-
30.	Prabhuligeshwara	55123
31.	Renuka sugars Ltd.,	14769
32.	Siruguppa sugar (Gowribidanur)	-
33.	Siraguppa sugars (Desanur)	1942
34.	Sundari sugars	-
35.	Shamnur sugars	18777
36.	Ugar sugar	126128
	Total:	540907
	Grand Total:	1220424

ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್‌ವಸತಿ

111(227): ಶ್ರೀ ಸಿರಾಜ್ ಶೇಖ್ (ಕೊಡ್ಲಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಪ್ರಶ್ನೆ-

ಅ. ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ ವಸತಿಗಾಗಿ ಸರ್ಕಾರವು ಕಾರ್ಯಗಳನ್ನೇನಾದರೂ ಹಮ್ಮಿಕೊಂಡಿರುವುದೆ.

ಆ. ಕಳೆದ ಎರಡು ವರ್ಷಗಳಿಂದ ಎಷ್ಟು ದೇವದಾಸಿಯರಿಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಖರ್ಚು ಮಾಡಿರುವ ಹಣವೆಷ್ಟು;

ಇ. ಇದರಲ್ಲಿ ಕೊಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ದೇವದಾಸಿಯರಿಗೆ ಇಲ್ಲಿಯವರೆಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಲಾಗಿದೆ.